# ಕಲ್ಕಿ ಅವತಾರ...

ಕನ್ನಡಿಗರಿಗೆ ಮತ್ತೊಂದು ಮನರಂಜನೆಯ ಹಬ್ಬ. 'ಕಲ್ಕಿ ಕನ್ನಡ' ಹೆಸರಿನಲ್ಲಿ ವಾಹಿನಿ ಆರಂಭವಾಗಿದ್ದು ಭರಪೂರ ಮನರಂಜನೆ ಹೊತ್ತು ಮನೆಬಾಗಿಲಿಗೆ ಪ್ರವೇಶಿಸಿದೆ. ಮನರಂಜನಾ ವಾಹಿನಿಯ ಕಾರ್ಯಕ್ರಮಗಳ ಪಟ್ಟಿ ಇಂತಿದೆ. ಪ್ರೀತಿ ಪ್ರೇಮದ ಬಾಂಧವ್ಯಗಳು ಮತ್ತು ಆ ಸುತ್ತ ಮುಖವಾಡಗಳನ್ನು ತೋರಿಸುವ 'ಅನುಬಂಧ' ಧಾರಾವಾಹಿ ಸೋಮವಾರದಿಂದ ಶುಕ್ರವಾರ ಸಂಜೆ ಆರು ಗಂಟೆಗೆ ಪ್ರಸಾರವಾದರೆ, ಪುರಾಣ ಕಥಾ ಹಂದರದ 'ಅಮ್ಮೋರು' ಸೋಮವಾರದಿಂದ ಶುಕ್ರವಾರ ಸಂಜೆ 6.30ಕ್ಕೆ ಬಿತ್ತರವಾಗಲಿದೆ.

ಸೋಮವಾರದಿಂದ ಶುಕ್ರವಾರ ರಾತ್ರಿ 7 ಗಂಟೆಗೆ ಪ್ರಸಾರವಾಗಲಿರುವ 'ಸೇವಂತಿ ಸೇವಂತಿ' ಧಾರಾವಾಹಿ ಪ್ರೀತಿಯ ಸಂಬಂಧಗಳ ಮೌಲ್ಯ, ಸ್ವಾರ್ಥ, ಸಾಧಿಸುವ ಛಲ ಮತ್ತಿತರ ವಿಷಯಗಳನ್ನು ತೋರಲಿದೆ. ಹಾಸ್ಯ ಕಲಾವಿದ ಜಹಾಂಗೀರ್ ಶನಿವಾರ ಮತ್ತು ಭಾನುವಾರ ರಾತ್ರಿ 8 ಗಂಟೆಗೆ ನಡೆಸಿಕೊಡುವ 'ಕಲ್ಕಿ ಎಕ್ಸ್‌ಪ್ರೆಸ್-ಲಕ್ ಇದ್ರೆ ಲಕ್ಷ್ಮಿ' ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ನಡೆಯುವ ಕಾರ್ಯಕ್ರಮ. ಇದು ಸ್ಥಳೀಯ ಪ್ರತಿಭೆಗಳಿಗೊಂದು ವೇದಿಕೆ. ಸೋಮವಾರದಿಂದ ಶುಕ್ರವಾರದವರೆಗೆ ಮಧ್ಯಾಹ್ನ 12.30ಕ್ಕೆ ಪ್ರಸಾರವಾಗುವ 'ಪಡ್ಡೂಸ್ ಕಿಚನ್', ಸೋಮವಾರದಿಂದ ಶುಕ್ರವಾರದವರೆಗೆ ಸಂಜೆ 5 ಗಂಟೆಗೆ 'ಪಾನಿ ಪುರಿ ವಿತ್ ಮುರಳಿ ಟಿ 20 ಲೈವ್', ನಿತ್ಯ ಬೆಳಿಗ್ಗೆ 6.30ಕ್ಕೆ ದೇವಾಲಯಗಳನ್ನು ದರ್ಶನ ಮಾಡಿಸುವ 'ಅಭಿಷೇಕ', ಮಂಕುತಿಮ್ಮನ ಕಗ್ಗ ವಿಶ್ಲೇಷಿಸುವ 'ನಮಸ್ತೆ ಕರುನಾಡು' ಹೀಗೆ ಬಗೆ ಬಗೆಯ ಕಾರ್ಯಕ್ರಮಗಳನ್ನು ವಾಹಿನಿಯಲ್ಲಿ ಕಾಣಬಹುದು. ನಿತ್ಯ ಬೆಳಿಗ್ಗೆ 8ರಿಂದ 9.30ರವರೆಗೆ ಸವಿತ್ರು ಶರ್ಮಾ 'ವಿಶ್ವರೂಪ' ಕಾರ್ಯಕ್ರಮ ನಡೆಸಿಕೊಡುವರು. ಹೀಗೆ ಸ್ವಾದ-ಆಸ್ವಾದ ದ ಅನುಭವಗಳನ್ನು 'ಕಲ್ಕಿ' ವಾಹಿನಿಯ ಕಾರ್ಯಮಗಳಲ್ಲಿ ಕಾಣಬಹು ದಾಗಿದ್ದು ಶೀಘ್ರವೇ ಮನೆಯೊಳಗಿನ ಟೀವಿಯ ಪರದೆ ಮೇಲೆ ಕಾಣಿಸಿಕೊಳ್ಳಲಿದೆ.